# BSNL EMPLOYEES UNION
# KARNATAKA CIRCLE BENGALURU

***08.01.2018 - Unanimous decisions taken in today's meeting of "The All Unions and Associations of BSNL" to intensify the struggles for achieving wage revision and for the 'rolling back of the creation of Subsidiary Tower Company'.***

"The All Unions and Associations of BSNL", held its meeting at New Delhi today to discuss about the steps to be taken for intensifying the struggles for the settlement of 3rd Pay Revision and to ensure the 'rolling back of the creation of Subsidiary Tower Company'.

The meeting was attended by the General Secretaries / Representatives of BSNLEU, NFTE, SNEA, AIBSNLEA, FNTO, BTEU, SEWA BSNL, AIGETOA, BSNL MS, TEPU, BSNL ATM and TOA BSNL.

The meeting was presided over by Com. K. Jayaprakash, GS, FNTO. The following decisions are taken unanimously for intensifying the struggles to achieve the demands.

## *Struggle programme:*

(1) Whole day Satyagraha for 5 days from 30.01.2018. The starting of the Satyagraha will be marked by the paying of 'Shradhanjali' at Gandhi Samadi at New Delhi on 30.01.2018, by the leaders of the "The All Unions and Associations of BSNL".
(2) 'Indefinite Work According to Rule' from 30.01.2018.
(3) Massive "March to Sanchar Bhawan" on 28.02.2018.
(4) Leaders of "The All Unions and Associations of BSNL" will take all out efforts to meet Shri Manoj Sinha, Hon'ble Minister of State for Communications, the Secretary DoT and CMD BSNL, within a week's time.
(5) The meeting entrusted to Com. G.L. Jogi, Leader, SNEA, and to Com. Prahlad Rai, GS, AIBSNLEA, with the responsibility of exploring possibilities to take legal action to roll back the creation of Subsidiary Tower Company.
(6) A Steering Committee consisting of the General Secretaries of BSNLEU, NFTE, SNEA and AIBSNLEA is formed to monitor the struggles.
(7) Meeting the leaders of political parties and Central Trade Unions, by 30.01.2018, to mobilise support in favour of the demands of "The All Unions and Associations of BSNL".

## *Charter of demands*

(1) Settle:-
   (a) 3rd Pay Revision with 15% fitment from 01.01.2017.
   (b) Settle pension revision.
   (c) Settle left-out issues of the 2nd PRC.

(2) Roll back the creation of Subsidiary Tower Company.
(3) No reduction in the retirement age from 60 to 58 and no VRS.

**P.Abhimanyu, General Secretary, BSNLEU CHQ**

# BSNL EMPLOYEES UNION
# KARNATAKA CIRCLE BENGALURU

**08.01.2017**

ಬಿ.ಎಸ್.ಎನ್.ಎಲ್ ನ ಎಲ್ಲ ಸಿಬ್ಬಂದಿ ವರ್ಗದವರಿಗೆ ಮೂರನೇ ವೇತನ ಪರಿಷ್ಕರಣೆಯನ್ನು ಜಾರಿಗೊಳಿಸಲು ಮತ್ತು ದಿನಾಂಕ ೦೪.೦೧.೨೦೧೮ ರಿಂದ ಪ್ರಾರಂಭಿಸಿರುವ ಬಿ.ಎಸ್.ಎನ್.ಎಲ್ ಸಬ್ಸಿಡಿಯರಿ ಟವರ್ ಕಂಪನಿಯನ್ನು ರದ್ದುಗೊಳಿಸುವ ಸಲುವಾಗಿ ಮಾಡಬೇಕಿರುವ ತೀವ್ರ ಮಟ್ಟದ ಹೋರಾಟಗಳನ್ನು ನಿಗದಿಪಡಿಸಲು ದಿನಾಂಕ ೦೮.೦೧.೨೦೧೮ ರಂದು ನವದೆಹಲಿಯಲ್ಲಿ ನಡೆಸಿದ ಆಲ್ ಯೂನಿಯನ್ಸ್ ಮತ್ತು ಅಸೋಸಿಯೇಷನ್ಸ್ ಆಫ್ ಬಿ.ಎಸ್.ಎನ್.ಎಲ್ ನ ಸಭೆಯ ಸರ್ವಾನುಮತದ ತೀರ್ಮಾನಗಳು:

ಸಭೆಯಲ್ಲಿ ಬಿ.ಎಸ್.ಎನ್.ಎಲ್.ಇ.ಯು, ಎನ್.ಎಫ್.ಟಿ.ಇ., ಎಸ್.ಎನ್.ಇ.ಎ., ಎ.ಐ.ಬಿ.ಎಸ್.ಎನ್.ಎಲ್.ಇ.ಎ., ಎಫ್.ಎನ್.ಟಿ.ಒ., ಬಿ.ಟಿ.ಇ.ಯು., ಸೇವಾ ಬಿ.ಎಸ್.ಎನ್.ಎಲ್., ಎ.ಐ.ಜಿ.ಟಿ.ಒ.ಎ., ಬಿ.ಎಸ್.ಎನ್.ಎಲ್. ಎಮ್. ಎಸ್., ಟೇಪು, ಬಿ.ಎಸ್.ಎನ್.ಎಲ್. ಎ.ಟಿ.ಎಮ್ ಮತ್ತು ಟಿ.ಒ.ಎ. ಬಿ.ಎಸ್.ಎನ್.ಎಲ್ ಸಂಘಟನೆಗಳ ಪ್ರಧಾನ ಕಾರ್ಯದರ್ಶಿಗಳು ಅಥವಾ ಅವರ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆಯನ್ನು ಎಫ್.ಎನ್.ಟಿ.ಒ. ಸಂಘಟನೆಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಜಯಪ್ರಕಾಶ್ ಅವರು ವಹಿಸಿದ್ದರು.

ಕೆಳಗೆ ಕಾಣಿಸಿರುವ ತೀರ್ಮಾನಗಳನ್ನು ಸಭೆಯು, ಸರ್ವಾನುಮತದಿಂದ ಅಂಗೀಕರಿಸಿತು:

## ಹೋರಾಟದ ಕಾರ್ಯಕ್ರಮಗಳು:

೧. ದಿನಾಂಕ ೩೦.೦೧.೨೦೧೮ ರಿಂದ ಐದು ದಿನಗಳ ಕಾಲ – ದಿನಪೂರ್ತಿ ಅವಧಿಯ ಸತ್ಯಾಗ್ರಹ ಕಾರ್ಯಕ್ರಮ.

   (ಬೆಳಗ್ಗೆ ಏಳು ಘಂಟೆಯಿಂದ ರಾತ್ರಿ ಎಂಟು ಗಂಟೆಯವರೆವಿಗೆ ಸತ್ಯಾಗ್ರಹ / ಧರಣಿ ಕಾರ್ಯಕ್ರಮ ಮಾಡುವುದು; ಎಲ್ಲ ಸಂಘಟನೆಗಳ ಪದಾಧಿಕಾರಿಗಳು ಸರದಿಯ ಮೇಲೆ ಐದು ದಿನಗಳ ಕಾಲ ಸತ್ಯಾಗ್ರಹ / ಧರಣಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಹಾಗೆ ಮಾಡುವುದು)

ದಿನಾಂಕ ೩೦.೦೧.೨೦೧೮ ರಂದು, ನವ ದೆಹಲಿಯಲ್ಲಿ ಸತ್ಯಾಗ್ರಹ ಕಾರ್ಯಕ್ರಮವನ್ನು ಆಲ್ ಯೂನಿಯನ್ಸ್ ಮತ್ತು ಅಸೋಸಿಯೇಷನ್ಸ್ ಆಫ್ ಬಿ.ಎಸ್.ಎನ್.ಎಲ್ ನ ನಾಯಕರುಗಳು ರಾಜಘಾಟ್ ನಲ್ಲಿನ ಗಾಂಧಿ ಸಮಾಧಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿ ಸತ್ಯಾಗ್ರಹವನ್ನು ಪ್ರಾರಂಭಿಸುವರು.

(ಜಿಲ್ಲಾ ಮಟ್ಟದಲ್ಲೂ ಸಹ ದಿನಾಂಕ ೩೦.೦೧.೨೦೧೮ ರಂದು, ಸತ್ಯಾಗ್ರಹ ಪ್ರಾರಂಭಿಸುವ ಮುಂಚೆ ಗಾಂಧಿ ಸ್ಮರಣೆ ಮಾಡಿ, ಸತ್ಯಾಗ್ರಹವನ್ನು ಪ್ರಾರಂಭಿಸುವುದು)

೨. ದಿನಾಂಕ ೩೦.೦೧.೨೦೧೮ ರಿಂದ ಪ್ರಾರಂಭಿಸಿ, ಅನಿರ್ದಿಷ್ಠಕಾಲದ ದಿನಗಳ ವರೆವಿಗೆ ನಿಯಮಕ್ಕನುಸಾರವಾಗಿ ಕೆಲಸ ಮಾಡುವ ನೀತಿಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದು.

   (ಕರ್ತವ್ಯ ನಿರ್ವಹಿಸಲು ಅವಶ್ಯವಾದ ಸಾಮಾಗ್ರಿಗಳು ದೊರಕಿದರೆ ಕಾರ್ಯ ನಿರ್ವಹಿಸುವುದು; ನಾವೇ ಅತೀ ಉತ್ಸಾಹ ತೋರಿಸಿ ಕಾರ್ಯ ನಿರ್ವಹಣೆ ಮಾಡುವುದು

ಅಥವಾ ಕೆಲಸದ ಸಮಯದ ನಂತರವೂ ಅಧಿಕ ಕಾರ್ಯ ನಿರ್ವಹಿಸುವ ಆಸಕ್ತಿ ತೋರುವ ಅವಶ್ಯಕತೆ ಇರುವುದಿಲ್ಲ)

೩. ದಿನಾಂಕ ೨೮ ಫೆಬ್ರವರಿ ೨೦೧೮ ರಂದು, ನವದೆಹಲಿಯಲ್ಲಿನ ಸಂಚಾರ ಭವನದ ಮುಂದೆ ಬೃಹತ್ ಮತಪ್ರದರ್ಶನ;

(ಹೆಚ್ಚು ಜನ ಸಂಗಾತಿಗಳು ನವ ದೆಹಲಿಗೆ ಪ್ರಯಾಣ ಮಾಡಲು ಕೂಡಲೇ ರೈಲು ಟಿಕೇಟುಗಳನ್ನು ಕಾದಿರಿಸಲು ಕ್ರಮಗಳನ್ನು ಪ್ರಾರಂಭಿಸುವುದು)

೪. ಆಲ್ ಯೂನಿಯನ್ಸ್ ಮತ್ತು ಅಸೋಸಿಯೇಷನ್ಸ್ ಆಫ್ ಬಿ.ಎಸ್.ಎನ್.ಎಲ್ ನ ನಾಯಕರುಗಳು ಮುಂದಿನ ಒಂದು ವಾರದ ಅವಧಿಯೊಳಗೆ, ಸಂಪರ್ಕ ಇಲಾಖೆಯ ರಾಜ್ಯ ಸಚಿವರಾದ ಶ್ರೀ.ಮನೋಜ್ ಸಿನ್ಹಾ ಅವರನ್ನು ; ದೂರ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳನ್ನು ಹಾಗೂ ಬಿ.ಎಸ್.ಎನ್.ಎಲ್ ನ ಸಿ.ಎಮ್.ಡಿ.ಅವರನ್ನು ಭೇಟಿ ಮಾಡಿ, ನಮ್ಮ ಬೇಡಿಕೆಗಳ ಬಗ್ಗೆ ಸಮಗ್ರ ಹಾಗೂ ಸಮಂಜಸ ವಿವರಣೆ ನೀಡಿ, ಬೇಡಿಕೆಗಳ ಈಡೇರುವಿಕೆಗೆ ಹಕ್ಕೊತ್ತಾಯ ಮಾಡುವುದು;

೫. ಈಗಾಗಲೇ ಪ್ರಾರಂಭವಾಗಿರುವ ಬಿ.ಎಸ್.ಎನ್.ಎಲ್ ಸಬ್ಸಿಡಿಯರಿ ಟವರ್ ಕಂಪನಿಯನ್ನು ರದ್ದುಗೊಳಿಸುವ ಸಲುವಾಗಿ, ಯಾವ ರೀತಿಯ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬ ಅಂಶವನ್ನು ಗೊತ್ತುಪಡಿಸಲು, ಎಸ್.ಎನ್.ಇ.ಎ – ಎ.ಐ.ಬಿ.ಎಸ್.ಎನ್.ಎಲ್.ಇ.ಎ., ಸಂಘಟನೆಗಳ ಹಿರಿಯ ಸಂಗಾತಿಗಳಾದ , ಕಾಂ. ಜಿ.ಎಲ್.ಜೋಗಿ ಮತ್ತು ಕಾಂ. ಪ್ರಹ್ಲಾದ ರಾಯ್ ಅವರುಗಳಿಗೆ ಜವಾಬ್ದಾರಿಯನ್ನು ನೀಡಿತು;

೬. ಮೇಲೆ ತಿಳಿಸಿರುವ, ಸರ್ವಾನುಮತದಿಂದ ಅಂಗೀಕಾರವಾದ ಈ ಎಲ್ಲ ಹೋರಾಟದ ಕಾರ್ಯಕ್ರಮಗಳು, ಎಲ್ಲ ವಲಯ/ಜಿಲ್ಲೆಗಳಲ್ಲಿ ಶಿಸ್ತು ಬದ್ಧವಾಗಿ ನಡೆಯುವ ಹಾಗೆ ನಿಗಾ ವಹಿಸಲು ಬಿ.ಎಸ್.ಎನ್.ಎಲ್.ಇ.ಯು, ಎನ್.ಎಫ್.ಟಿ.ಇ., ಎಸ್.ಎನ್.ಇ.ಎ., ಎ.ಐ.ಬಿ.ಎಸ್.ಎನ್.ಎಲ್.ಇ.ಎ., ಸಂಘಟನೆಗಳ ಪ್ರಧಾನ ಕಾರ್ಯದರ್ಶಿಗಳನ್ನು ಒಳಗೊಂಡಿರುವ ಜವಾಬ್ದಾರಿಯುತ ಸಂಚಾಲನ ಸಮಿತಿಯನ್ನು ನೇಮಿಸಲಾಗಿದೆ.

(ಜಿಲ್ಲಾ ಮಟ್ಟದಲ್ಲೂ ಸಹ ಎಲ್ಲ ಸಂಘಟನೆಗಳ ಜಿಲ್ಲಾ ಕಾರ್ಯದರ್ಶಿಗಳ ಸಂಚಾಲನಾ ಸಮಿತಿಯನ್ನು ರಚಿಸಿ, ಎಲ್ಲ ಸಂಘಟನೆಗಳ ಸದಸ್ಯರುಗಳು ಸರದಿಯ ಮೇಲೆ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಭಾಗವಹಿಸುವ ಹಾಗೆ ನಿಗಾ ಇಡುವುದು)

೭. ದಿನಾಂಕ ೩೦.೦೧.೨೦೧೮ ರ ಒಳಗೆ, ಪ್ರಮುಖ ರಾಜಕೀಯ ಪಕ್ಷಗಳ, ಕೇಂದ್ರ ಕಾರ್ಮಿಕ ಸಂಘಟನೆಗಳ ನಾಯಕರುಗಳನ್ನು ಭೇಟಿ ಮಾಡಿ, ನಮ್ಮ ಬೇಡಿಕೆ ಹಾಗೂ ಹೋರಾಟಗಳ ಬಗ್ಗೆ ಅವರಿಗೆ ಸಂಪೂರ್ಣ ಮಾಹಿತಿ ನೀಡಿ, ನಮ್ಮ ಹೋರಾಟಗಳಿಗೆ ಅವರುಗಳ ಬೆಂಬಲವನ್ನು ಪಡೆಯಲು ತೀರ್ಮಾನಿಸಲಾಯಿತು.

(ಸ್ಥಳೀಯವಾಗಿ ಸಹ ಸಿ.ಐ.ಟಿ.ಯು, ಎ.ಐ.ಟಿಯು.ಸಿ. ಮುಂತಾದ ಕಾರ್ಮಿಕ ಪರ ಸಂಘಟನೆಗಳ ನಾಯಕರುಗಳನ್ನು ಸಂಪರ್ಕಿಸಿ, ಐದು ದಿನಗಳ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಅವರುಗಳನ್ನು ಮಾತನಾಡಲು ಆಹ್ವಾನಿಸುವುದು)

## ಬೇಡಿಕೆಗಳು:

೧. ಜನವರಿ ೦೧ ೨೦೧೭ ರಿಂದ ಜಾರಿಯಾಗುವ ಹಾಗೆ, ಶೇಕಡ ೧೫ ರ ಕನಿಷ್ಠ ಫಿಟ್‌ಮೆಂಟ್ ನ ಆಧಾರದಲ್ಲಿ ಮೂರನೇ ವೇತನ ಪರಿಷ್ಕರಣೆ ಆಗಬೇಕು;
೨. ಪಿಂಚಣಿ ಪರಿಷ್ಕರಣೆ ಆಗಬೇಕು;
೩. ಎರಡನೇ ವೇತನ ಪರಿಷ್ಕರಣೆ ಸಂದರ್ಭದಲ್ಲಿ ಬಾಕಿ ಉಳಿದಿರುವ ವೇತನ ಸೌಲಭ್ಯ ಭತ್ಯೆಗಳನ್ನು ನೀಡಬೇಕು;
೪. ಈಗಷ್ಟೇ ಪ್ರಾರಂಭವಾಗಿರುವ ಬಿ.ಎಸ್.ಎನ್.ಎಲ್ ಸಬ್ಸಿಡಿಯರಿ ಟವರ್ ಕಂಪನಿಯನ್ನು ರದ್ದುಗೊಳಿಸಬೇಕು;
೫. ನಿವೃತ್ತಿ ವಯಸ್ಸನ್ನು ೬೦ ರಿಂದ ೫೮ ಕ್ಕೆ ಕಡಿಮೆ ಗೊಳಿಸುವ ಆಲೋಚನೆಯನ್ನು ರದ್ದುಪಡಿಸಬೇಕು; ಸ್ವಯಂ ನಿವೃತ್ತಿ ಯೋಜನೆಯನ್ನು ರದ್ದು ಪಡಿಸಬೇಕು;

ಬಿ.ಎಸ್.ಎನ್.ಎಲ್. ಎಂಪ್ಲಾಯೀಸ್ ಯೂನಿಯನ್‌ನಿನ ಜಿಲ್ಲಾ ಕಾರ್ಯದರ್ಶಿಗಳು ಈ ಮೇಲ್ಕಂಡ ಮಾಹಿತಿಗಳನ್ನು ಈ ಕೂಡಲೇ ನಮ್ಮ ಸಂಘಟನೆಯ ನೋಟೀಸ್ ಬೋರ್ಡ್‌ಗಳಲ್ಲಿ ಪ್ರಚಾರ ಪಡಿಸಬೇಕು; ತಮ್ಮ ಜಿಲ್ಲೆಗಳ ಎಲ್ಲ ಶಾಖಾ ಕಾರ್ಯದರ್ಶಿಗಳಿಗೆ ಮಾಹಿತಿಯ ಪ್ರತಿಗಳನ್ನು ಈ ಕೂಡಲೇ ತಲುಪಿಸಿ, ಎಲ್ಲ ಸಾಮಾನ್ಯ ಸದಸ್ಯರುಗಳ ಗಮನಕ್ಕೆ ಬರುವ ಹಾಗೆ ನೋಟೀಸ್ ಬೋರ್ಡ್ ಮುಖಾಂತರ ಅಥವಾ ಪ್ರತಿಯೊಬ್ಬ ಸದಸ್ಯರಿಗೂ ವಯಕ್ತಿಕವಾಗಿ ಪ್ರತಿಗಳನ್ನು ತಲುಪಿಸಿ, ಮುಂದಿನ ದಿನಗಳ ಮುಷ್ಕರದ ವಿಷಯಗಳು ಅವರಿಗೆ ತಲುಪುವ ಹಾಗೆ ನೋಡಿಕೊಳ್ಳಬೇಕು; ಯಶಸ್ವಿ ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಲು, ಶಾಖಾ ಮತ್ತು ಜಿಲ್ಲಾ ಸಭೆಗಳನ್ನು ಕೂಡಲೇ ಆಯೋಜಿಸಬೇಕು.

ತಮ್ಮ ಜಿಲ್ಲೆಗಳಲ್ಲಿ ಪ್ರಾತಿನಿಧ್ಯವನ್ನು ಹೊಂದಿರುವ ಆಲ್ ಯೂನಿಯನ್ಸ್ ಮತ್ತು ಅಸೋಸಿಯೇಷನ್ಸ್ ಆಫ್ ಬಿ.ಎಸ್.ಎನ್.ಎಲ್ ನ ಸಭೆಯನ್ನು ಕರೆದು ಹೋರಾಟದ ಕಾರ್ಯಕ್ರಮಗಳನ್ನು ವಿವರಿಸಿ, ಸತ್ಯಾಗ್ರಹ ಕಾರ್ಯಕ್ರಮಗಳು ಯಶಸ್ವಿಯಾಗುವ ಹಾಗೆ ಸಂಪೂರ್ಣವಾಗಿ ಮುತುವರ್ಜಿ ವಹಿಸುವುದು.

ಗುಂಡಣ್ಣ ಸಿ.ಕೆ ವಲಯ ಕಾರ್ಯದರ್ಶಿ

ಬಾಲಕೃಷ್ಣ ಎಮ್.ಸಿ. ವಲಯ ಅಧ್ಯಕ್ಷರು

ಸುದರ್ಶನ್ ಹೆಚ್.ವಿ. ಸಿ.ಹೆಚ್.ಕ್ಯೂ ಸಂಘಟನಾ ಕಾರ್ಯದರ್ಶಿ

==========================================================